ಬಂದಿರುವೆ. ಎಷ್ಟೋ ಹಸ್ತಪ್ರತಿಗಳು ಜೀರ್ಣಾವಸ್ಥೆಯಲ್ಲಿವೆ. ಹಾಳೆಗಳು ಹರಿದು ಹೋಗಿವೆ. ಇದನ್ನೆಲ್ಲ ಸಂರಕ್ಷಿಸಲು ಡಿಜಿಟಲೀಕರಣ ಮಾಡಬೇಕು. ಅದಕ್ಕೆ ಲಕ್ಷಾಂತರ ರೂಪಾಯಿ ಹಣ ಬೇಕಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ಅದಕ್ಕೆ ಅವಕಾಶವಿರಲಿಲ್ಲ. ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಗೆ ಪೂರ್ವಿಕರಲ್ಲಿ ಕೆಂಪುಬಟ್ಟೆ ಸುತ್ತಿಡುವ ಸರಳ ವಿಧಾನವಿದೆ. ಗಂಜಿಯ ಲವಲೇಶವೂ ಇಲ್ಲದಂತಹ ಅರಳೆಯ ವಸ್ತ್ರವನ್ನೇ ಬಳಸಬೇಕು. ಇಲ್ಲವಾದರೆ ನುಸಿ, ಹುಳುಗಳು ಹಿಡಿಯುತ್ತವೆ. ಜೈನ ನೋಂಪಿಗಳಲ್ಲಿ ಮಾಡುವ ಅನೇಕ ದಾನಗಳಲ್ಲಿ 'ಶ್ರುತಪಾವಡ'ಕ್ಕೆ ಮಹತ್ವವಿದೆ. ಗ್ರಂಥಗಳು ಸರಸ್ವತೀ ಸ್ವರೂಪವಾದ್ದರಿಂದ, ಅದಕ್ಕೆ ತೊಡಿಸುವ ವಸ್ತ್ರಗಳಿಗೆ ಈ ಹೆಸರು ಬಂದಿದೆ. ಜೈನರು ವ್ರತಗಳಲ್ಲಿ ಇಂತಹ ವಸ್ತ್ರಗಳನ್ನು ದಾನವಾಗಿ ಕೊಟ್ಟು ಗ್ರಂಥ ಸಂರಕ್ಷಣೆ ಮಾಡುತ್ತಿದ್ದರು. ನಿವೃತ್ತಿಯ ಅಂಚಿಗೆ ಬಂದಿದ್ದಾಗ ನಾನು ಹೋಗುವ ಮೊದಲು ಈ ಸರಳ ವಿಧಿಯನ್ನು ಮಾಡಿಯೇ ಹೋಗಬೇಕೆಂದು ಮನಸ್ಸು ತುಡಿಯಿತು. ಆಗಿನ ನಿರ್ದೇಶಕರಾಗಿದ್ದ ನೀಲಗಿರಿ ತಳವಾರ್ ಅವರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದೆ. ಅವರಿಗೆ ಹಸ್ತಪ್ರತಿಗಳ ಮೇಲೆ ಒಲವು ಇದ್ದುದರಿಂದ ಅವರೂ ರಕ್ಷಣೆಯ ಬಗ್ಗೆ ಆಲೋಚಿಸುತ್ತಿದ್ದರು. ಹಾಗಾಗಿ ತಕ್ಷಣ ಸ್ಪಂದಿಸಿ, 'ನೀವು ತಯಾರಿ ಮಾಡಿಕೊಳ್ಳಿ, ನಾನು ಹಣದ ಏರ್ಪಾಡು ಮಾಡುತ್ತೇನೆ' ಅಂದರು. ನನ್ನ ನಿವೃತ್ತಿಗೂ ಮೊದಲು ಹಸ್ತಪ್ರತಿಗಳ ಸಂರಕ್ಷಣೆ ಮಾಡಿದ್ದು ನನಗೆ ಧನ್ಯತೆಯ ಭಾವವನ್ನು ತಂದಿತು.

◆ **ನೀವು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗ್ರಂಥ ಸಂಪಾದನಾಕಾರರಾಗಿ ಕೆಲಸ ಆರಂಭಿಸಿದ ಕಾಲದಲ್ಲಿ ಸಂಸ್ಥೆಗೆ ಹಾ.ಮಾ. ನಾಯಕರಂತಹ ನಿರ್ದೇಶಕರಿದ್ದರು. ಒಂದು ಕಡೆ ವಿಶ್ವಕೋಶದ ಕಾರ್ಯ ಮತ್ತೊಂದು ಕಡೆ ಭಾಷಾಂತರ ವಿಭಾಗ, ಇನ್ನೊಂದು ಕಡೆ ಹರಿದಾಸ ಸಾಹಿತ್ಯ... ಸಂಸ್ಥೆಯ ವಾತಾವರಣ ಆ ದಿನಗಳಲ್ಲಿ ಹೇಗಿತ್ತು ಮತ್ತು ನಿಮ್ಮನ್ನು ಹೇಗೆ ಪ್ರಭಾವಿಸಿತು?**

ನಾನು ಅಧ್ಯಯನ ಸಂಸ್ಥೆ ಸೇರಿದ್ದು ಹಾ.ಮಾ. ನಾಯಕರು ನಿರ್ದೇಶಕರಾಗಿದ್ದ ಸಂದರ್ಭದಲ್ಲಿ. ಆಗ ನಮ್ಮ ಸಂಸ್ಥೆಯಲ್ಲಿ ಹಲವಾರು ವಿಭಾಗಗಳಿದ್ದವು. ಎಲ್ಲಾ ವಿಭಾಗಗಳೂ ಜೇನುಗೂಡಿನಂತೆ ಸದಾ ಕ್ರಿಯಾಶೀಲವಾಗಿರುತ್ತಿದ್ದವು. ದೊಡ್ಡ ದೊಡ್ಡ ವಿದ್ವಾಂಸರು ಪ್ರತಿ ವಿಭಾಗದಲ್ಲೂ ಇದ್ದರು. ಆ ತಲೆಮಾರಿನ ವಿದ್ವಾಂಸರು ಶಿಸ್ತು, ಪಾಂಡಿತ್ಯಕ್ಕೆ ಹೆಸರಾಗಿದ್ದವರು. ನಾಯಕರು ಶಿಸ್ತಿಗೆ ಪ್ರಸಿದ್ಧರಾಗಿದ್ದವರು. ಬೆಳಗ್ಗೆ ಹತ್ತು ಗಂಟೆಗೆ ನಿಖರವಾಗಿ ಸಂಸ್ಥೆಗೆ ಎಲ್ಲರೂ ಹೋಗುತ್ತಿದ್ದೆವು. ಹಾ.ಮಾ. ನಾಯಕರು ಅರ್ಧಗಂಟೆ ಮೊದಲೇ ಕಚೇರಿಗೆ ಹಾಜರಾಗಿರುತ್ತಿದ್ದರು. ನನಗದೆಷ್ಟು ಅಭ್ಯಾಸವಾಗಿದೆಯೆಂದರೆ... ನಿವೃತ್ತಿಯ ನಂತರ ಆಹ್ವಾನದ ಮೇರೆಗೆ ಅಧ್ಯಯನ ಸಂಸ್ಥೆಗೆ ಹೋಗುವಾಗಲೂ ನಾನು ಅದೇ ಸಮಯವನ್ನು ಪರಿಪಾಲಿಸುತ್ತೇನೆ! ಉದ್ಯೋಗಿಗಳು ಪದೇಪದೇ ಕಾಫಿಗೆ ಹೋಗುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಸಂಜೆ ಯಾರೂ ಕಚೇರಿಯಿಂದ ಐದುಮೂವತ್ತಕ್ಕೆ ಮೊದಲು ನಿರ್ಗಮಿಸುತ್ತಿರಲಿಲ್ಲ. ಹೀಗಾಗಿ ಯಾವುದೇ ಯೋಜನೆಗಳು ನಿಗದಿತ ಅವಧಿಯಲ್ಲೇ ಮುಗಿಯುತ್ತಿದ್ದವು. ಆ ಕಾಲವನ್ನು ಅಧ್ಯಯನ ಸಂಸ್ಥೆಯ ಸುವರ್ಣಯುಗ ಎನ್ನಬಹುದು. ನೂರಾರು ಗ್ರಂಥಗಳು ಪ್ರಕಟವಾಗುತ್ತಿದ್ದ ಕಾಲ; ನನಗೂ ಪುಸ್ತಕಗಳು ಪ್ರಕಟವಾಗಬೇಕು ಅನ್ನಿಸುತ್ತಿತ್ತು. ಅವರಂತೆ ಕೆಲಸ ಮಾಡಬೇಕು ಅಂದುಕೊಳ್ಳುತ್ತಿದ್ದೆ. ಪ್ರಾಮಾಣಿಕವಾಗಿ ದುಡಿಯುವವರ ಬಗ್ಗೆ ನಾಯಕರಿಗೆ ಮನಸ್ಸಿನಲ್ಲಿಯೇ ಪ್ರೀತಿ ಗೌರವಗಳಿದ್ದವು.

ವಿಶ್ವಕೋಶ ವಿಭಾಗದಲ್ಲಿ ಜಿ.ಟಿ. ನಾರಾಯಣರಾಯರು, ಪ್ರೊ. ಎಚ್.ಎಸ್.ಕೆ ಅವರು ಇದ್ದರು. ಇವರ ಮಾರ್ಗದರ್ಶನದಲ್ಲಿ ಅಲ್ಲಿದ್ದ ಉದ್ಯೋಗಿಗಳು ಒಟ್ಟಾಗಿ ಸೇರಿ ಕೆಲಸ ಮಾಡುತ್ತಿದ್ದರು.